**<u>ಸಾಕ್ಷಿಯನ್ನು ದಿನಾಂಕ:30.07.2026 ರಂದು ಕರೆಯಿಸಿ ಪ್ರಮಾಣಿಕರಿಸಲಾಯಿತು.</u>**

**<u>ಮುಖ್ಯ ವಿಚಾರಣೆ: ಅರ್ಜಿದಾರರ ಪರ ಶ್ರೀ ಎಂ.ಎಸ್.ವಿ ವಕೀಲರಿಂದ.</u>**

ಸಾಕ್ಷಿಯು ತನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣಪತ್ರದಲ್ಲಿ ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ಸಂಗತಿಗಳು ಸರಿ ಹಾಗೂ ಸತ್ಯವಾಗಿರುತ್ತದೆ ಎಂದು ಪ್ರಮಾಣೀಕರಿಸಿರುತ್ತಾರೆ.

ಸಾಕ್ಷಿಯು ಮುಂದುವರೆದು ನಾನು ಮತ್ತು ವಾಸುದೇವಮೂರ್ತಿರವರು ನಿಪಿ.1 ವಿಲ್‌ನ ಕೊನೆಯ ಪುಟದಲ್ಲಿ ಸ್ಟ್ಯಾಂಪ್ ವೆಂಡರ್ ರವರ ಸಮಕ್ಷಮ ಸಹಿ ಮಾಡಿರುತ್ತೇವೆ. ಆ ಸಮಯದಲ್ಲಿ ನಮ್ಮನ್ನು ಬಿಟ್ಟು ಬೇರೆ ಯಾರು ಸಹಿ ಮಾಡಿರುವುದಿಲ್ಲ. ಆದರೆ ನಾನು ವಿಲ್ ನೊಂದಾವಣೆಯಾಗುವ ಕಾಲಕ್ಕೆ ಉಪನೊಂದಣಾಧಿಕಾರಿ ಕಚೇರಿಗೆ ಹೋಗಿಲ್ಲ ಹಾಗೂ ಅಲ್ಲಿ ಸಹಿ ಮಾಡಿರುವುದಿಲ್ಲ. ಸಾಕ್ಷಿಯು ಮುಂದುವರೆದು ಪದ್ಮಾವತಮ್ಮ ಯಾರೆಂದು ನನಗೆ ಗೊತ್ತಿಲ್ಲ ಹಾಗೂ ಅವರಿಗೆ ಎಷ್ಟು ಜನ ಮಕ್ಕಳು ಎಂದು ನನಗೆ ಗೊತ್ತಿಲ್ಲ. ವಾಸುದೇವಮೂರ್ತಿಯು ನನ್ನ ಸ್ನೇಹಿತನಾಗಿದ್ದು, ಆತನ ಹೇಳಿದ ಮೇರೆಗೆ ನಾನು ಸಹಿ ಮಾಡಿರುತ್ತೇನೆ.

ನಿಪಿ.1 ರಲ್ಲಿ ಕೊನೆ ಪುಟದಲ್ಲಿ ಇರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ.1(ಎ) ಎಂದು ಗುರುತಿಸಲಾಯಿತು.

ಸದರಿ ಪ್ರಕರಣದಲ್ಲಿ, ಯಾರು ಎದುರುದಾರರು ಇರದ ಕಾರಣ, ಪಾಟಿ ಸವಾಲು ಇಲ್ಲ.

(**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕೃತಗೊಳಿಸಲಾಯಿತು**)

**ಓ.ಹೇ.ಕೇ.ಸ.ಇದೆ**

**(ಮಾಯಣ್ಣ.ಬಿ.ಎಲ್)**
**2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು**
**ಕೋಲಾರ**

**<u>ಸಾಕ್ಷಿಯನ್ನು ದಿನಾಂಕ:30.07.2026 ರಂದು ಕರೆಯಿಸಿ ಪ್ರಮಾಣಿಕರಿಸಲಾಯಿತು.</u>**

**<u>ಮುಖ್ಯ ವಿಚಾರಣೆ: ಅರ್ಜಿದಾರರ ಪರ ಶ್ರೀ ಎಂ.ಎಸ್.ವಿ ವಕೀಲರಿಂದ.</u>**

ಸಾಕ್ಷಿಯು ತನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣಪತ್ರದಲ್ಲಿ ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ಸಂಗತಿಗಳು ಸರಿ ಹಾಗೂ ಸತ್ಯವಾಗಿರುತ್ತದೆ ಎಂದು ಪ್ರಮಾಣೀಕರಿಸಿರುತ್ತಾರೆ.

ಚಂದ್ರಶೇಖರ್ ರವರು ನನ್ನ ಚಿಕ್ಕಪ್ಪ. ಅವರು ಈಗ ಮೃತಪಟ್ಟಿರುತ್ತಾರೆ. ಅವರಿಗೆ ಒಟ್ಟು ಮೂರು ಜನ ಮಕ್ಕಳು, ಅಂದರೆ ಪ್ರವೀಣ್ ಕುಮಾರ್, ನಾಗಶೇಷಮೌಳಿ ಮತ್ತು ನಾಗಪ್ರತಿಭಾ. ಪ್ರವೀಣ್ ಕುಮಾರ್ ಈಗ ಮೃತಪಟ್ಟಿರುತ್ತಾರೆ. ನಾನು ನನ್ನ ಚಿಕ್ಕಪ್ಪನ ಸಹಿಯನ್ನು ನೋಡಿದರೆ ಗುರುತಿಸುತ್ತೇನೆ. ನಿಪಿ.1 ವಿಲ್ ನಲ್ಲಿ ಇರುವ ಚಂದ್ರಶೇಖರ್ ರವರ ಸಹಿಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ನಿಪಿ.1(ಬಿ) ಎಂದು ಗುರುತಿಸಲಾಯಿತು.

ಸದರಿ ಪ್ರಕರಣದಲ್ಲಿ, ಯಾರು ಎದುರುದಾರರು ಇರದ ಕಾರಣ, ಪಾಟಿ ಸವಾಲು ಇಲ್ಲ.

(**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕೃತಗೊಳಿಸಲಾಯಿತು**)

**ಓ.ಹೇ.ಕೇ.ಸ.ಇದೆ**

**(ಮಾಯಣ್ಣ.ಬಿ.ಎಲ್)**
**2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು**
**ಕೋಲಾರ**